


International Journal of Kannada Research
www.kannadajournal.com

**ISSN: 2454–5813**
IJKR 2018; 4(1): 88-89
© 2018 IJKR
www.kannadajournal.com
Received: 19-11-2017
Accepted: 20-12-2017

**ಡಾ.ಶಿವಸೋಮಪ್ಪ ನಿಟ್ಟೂರು**
ಬೋಧನ ಸಹಾಯಕರು
ಜಾನಪದ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೫೮೦೦೦೩

**Correspondence**
**ಡಾ.ಶಿವಸೋಮಪ್ಪ ನಿಟ್ಟೂರು**
ಬೋಧನ ಸಹಾಯಕರು
ಜಾನಪದ ಅಧ್ಯಯನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೫೮೦೦೦೩

# ಜನಪದ ಕಥನಗೀತೆ 'ಕಲಿಯುಗದ ಬಾಲೆ'ಯ ಪ್ರಸ್ತುತತೆ

**ಡಾ.ಶಿವಸೋಮಪ್ಪ ನಿಟ್ಟೂರು**

ಜನಪದ ಸಾಹಿತ್ಯವು ತಾಯಿ ಬೇರು. ಇದರ ಹರವು ಕೂಡ ವಿಸ್ತಾರ. "ಜನಪದ ಸಾಹಿತ್ಯ ಕ್ಷೇತ್ರ ಅತ್ಯಂತ ವಿಶಾಲ ಮತ್ತು ವಿಸ್ತಾರವಾದ ಹರವನ್ನು ಪಡೆದುಕೊಂಡು ವೈವಿಧ್ಯಮಯವಾಗಿ ಬೆಳೆದುಕೊಂಡು ಬಂದಿದೆ. ಶತಮಾನಗಳ ಕಾಲ ಜನಪದರು ಇದರ ಜೊತೆಗೆ ಮೈಮರೆದು ಮತ್ತು ಮನ ತೆರೆದು ಮಾತನಾಡಿದ್ದಾರೆ. ಸುಖ, ದುಃಖಗಳಲ್ಲಿ ತಮಗಾದ ಜೀವನಾನುಭವಗಳನ್ನು ಅಭಿವ್ಯಕ್ತಿಸಿದ್ದಾರೆ. ವಿಶಾಲ ಹೃದಯಿಗಳಾದ ಜನಪದರು ತಮ್ಮೆಲ್ಲ ಸಂಕುಚಿತ ಭಾವನೆಗಳನ್ನು ಬದಿಗೊತ್ತಿ ಭಾವೈಕ್ಯದ ಜೀವನವನ್ನು ಸಾಗಿಸಿದ್ದಾರೆ"(ಜನಪದ ಕಥನಗೀತೆಗಳು, ಡಾ.ಪಿ.ಕೆ.ಖಂಡೋಬಾ, ಡಾ.ಟಿ.ಎಂ.ಭಾಸ್ಕರ್ ಪ್ರಸ್ತಾವನೆಯಿಂದ) ಎಂದು ಜಾನಪದ ವಿದ್ವಾಂಸರು ಹೇಳುವ ಮಾತು ಸೂಕ್ತವಾದುದು. ಜನಪದರು ಕಂಡದ್ದನ್ನು ನೇರವಾಗಿ ಹೇಳುವ ಗುಣವಿಶೇಷತೆಯನ್ನು ಹೊಂದಿದ್ದಾರೆ. ಅಲ್ಲದೆ ತಮ್ಮ ಸುತ್ತಮುತ್ತಲಿನಲ್ಲಿ ನಡೆಯುವ ಘಟನೆಗಳನ್ನೇ ಆಧರಿಸಿ ಕಥನಗೀತೆಗಳನ್ನಾಗಿಸುವ ಕಲೆ ಕರಗತವಾಗಿರುತ್ತದೆ. ಇಂಥ ಎಷ್ಟೋ ಜನಪದ ಕಥನಗೀತೆಗಳು ಇಂದು ನಮಗೆ ಲಭ್ಯವಿವೆ. ಆದರೆ ಇಲ್ಲಿ 'ಜನಪದ ಕಥನಗೀತೆಗಳು' ಎಂಬ ಕೃತಿಯಲ್ಲಿ ಡಾ.ಪಿ.ಕೆ.ಖಂಡೋಬಾ, ಡಾ.ಟಿ.ಎಂ.ಭಾಸ್ಕರ್ ಅವರು ಸಂಗ್ರಹಿಸಿದ ಕಥನಗೀತೆಗಳಲ್ಲಿ 'ಕಲಿಯುಗದ ಬಾಲೆ' ಎಂಬ ಗೀತೆಯು ಪ್ರಸ್ತುತತೆಗೆ ಹೆಚ್ಚು ಹೊಂದಿಕೊಳ್ಳುತ್ತದೆ. ಆದ್ದರಿಂದ ಈ ಗೀತೆಯ ಪ್ರಸ್ತುತತೆಯನ್ನು ಇಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ.

ಜನಪದ ಕಥನಗೀತಕಾರರು 'ಕಲಿಯುಗದ ಬಾಲೆ' ಎಂದು ನೀಡಿದ ಶೀರ್ಷಿಕೆಯೇ ರೋಚಕವಾಗಿದೆ. ಕಲಿಯುಗದಲ್ಲಿ ಸ್ತ್ರೀಯ ನಡವಳಿಕೆಯನ್ನು ಬಿಂಬಿಸುತ್ತದೆ. ಈ ಗೀತೆಯ ಕಥೆಯೆಂದರೆ; ಇಪ್ಪುತ್ತು ಜನ ಅಕ್ಕತಂಗಿಯರ ಜೊತೆಯಾಗಿ ಹುಟ್ಟಿದ ಕಿರಿಯವಳ ಕುರಿತಾದ ಕಥೆಯುಳ್ಳದ್ದು. ಅವಳು ಮುಂದೆ ಮದುವೆಯಾಗಿ ತನ್ನ ಕಾಮಪಿಪಾಸೆಗಾಗಿ ಗಂಡ, ಮಕ್ಕಳನ್ನು ಕೊಂದು ಹದ್ದುಮೀರಿ ವರ್ತಿಸುವ ಗರತಿಯೊಬ್ಬಳು ಚಿತ್ರಣವಿರುವ ಕಥೆಯುಳ್ಳ ಗೀತೆ. ಸಾಂಪ್ರಾದಾಯಿಕತೆಯ ಹಿನ್ನಲೆಯುಳ್ಳ ಹೆಣ್ಣಾದರು, ಗಂಡ ದಂಡಿಗೆ ಹೋದ ತಕ್ಷಣ ತನ್ನ ಗೆಣೆಯನೊಂದಿಗೆ ಸೇರಿ, ಕಾಮದಾಟವಾಡಿ ಅದನ್ನು ನೋಡಿದ ಮಕ್ಕಳನ್ನು, ಅದು ತಿಳಿಯಬಾರದೆಂದು ಗಂಡನನ್ನು ಕೊಲ್ಲುವ ಮನಸ್ಥಿತಿಹೊಂದಿದ ಹೆಣ್ಣಾಗಿ ಗೋಚರವಾಗುತ್ತಾಳೆ. ಈ ಕಥಾನಕವು ಹೆಣ್ಣಿನ ದುರ್ವರ್ತನೆಯನ್ನು ಎತ್ತಿ ತೋರುತ್ತದೆ. ಈ ಕಥನ ಗೀತೆಯು ಪ್ರಸ್ತುತ ದಿನಮಾನಕ್ಕೆ ಹೆಚ್ಚು ಅನ್ವಯವಾಗುತ್ತದೆ. ಅಲ್ಲದೆ ಇದು ಜನ್ನನ ಯಶೋಧರ ಚರಿತ್ರೆ ಕಾವ್ಯವನ್ನು ಸ್ಮರಣೆಗೆ ತರುತ್ತದೆ.

ಈ ಕಥನಗೀತೆಯಲ್ಲಿ ಗಂಡನೊಬ್ಬನು ಸಹಜವಾಗಿ ಮನೆಯಿಂದ ಹಲವಾರು ದಿನಗಳವರೆಗೆ ದುಡಿಯುವುದಕ್ಕಾಗಿ ಹೊರಗೆ ಹೋಗಬೇಕಾದ ಸಂದರ್ಭ ಬಂದಾಗ ಹೆಂಡತಿಯಾದವಳಿಗೆ ತಾನು ಹೊರಗೆ ಹೋಗುವ ಉದ್ದೇಶವನ್ನು, ತನ್ನ ಮಕ್ಕಳು, ಮನೆಯ ಜವಾಬ್ದಾರಿಯನ್ನು ನೆನಪಿಸಿ ಹೋಗುವುದು ಸಾಮಾನ್ಯವಾಗಿರುತ್ತದೆ. ಅದೇ ರೀತಿ ಈ ಕಥಾನಕದಲ್ಲಿಯೂ ಸಹಿತ ಗಂಡನು ತನ್ನ ಹೆಂಡತಿಗೆ

ನಾನು ಆದರೆ ದಂಡಿಗೆ ಹೋಗುತೇನಿ
ಮಕ್ಕಳು ಬಲು ಜೋಕೆ। ಹೆಣ್ಣೆ
ಮನೆಕಡೆ ಬಲು ಜೋಕೆ

ಎಂದು ಹೇಳುವ ಮಾತುಗಳು ಮೇಲಿನ ಮಾತುಗಳನ್ನು ನೆನಪಿಗೆ ತರುತ್ತವೆ. ತಾನು ದಂಡಿಗೆ ಹೋಗುವುದಾಗಿ ಮನೆ ಮತ್ತು ಮಕ್ಕಳ ಕಡೆಗೆ ಗಮನ ಹರಿಸುವಂತೆ ಹೇಳಿ ಹೊರಡುತ್ತಾನೆ.

ಆದರೆ ಗಂಡನಿಲ್ಲದೆ ಒಂಟಿಯಾಗಿದ್ದ ಗರತಿಯು ನೀರಿಗೆ ಹೋಗುವಾಗಲೂ ಸಹಿತ ಅಲಂಕಾರ ಮಾಡಿಕೊಂಡು ವಾರಿಗಿಯವರೊಡನೆ ಹೋಗುತ್ತಾಳೆ. ಇದು ಇಂದಿನ ಹೆಣ್ಣು ಮಕ್ಕಳು ಮನೆಯಿಂದ ಹೊರಗೆ ಹೊರಟವರು ಅಲಂಕಾರ ಮಾಡಿಕೊಂಡು ಹೊರಡುವ ಸ್ಥಿತಿಯನ್ನು ಎತ್ತಿ ತೋರುತ್ತದೆ. ಇದು ಹಳ್ಳಿಯ ಹೆಣ್ಣುಮಕ್ಕಳು ವಯ್ಯಾರದ ಬೆಡಗನ್ನು ಪರಿಚಯಿಸುತ್ತದೆ.

ಆದರೆ ಗ್ರಾಮೀಣ ಪರಿಸರದಲ್ಲಿ ಕೆಲವು ತುಂಟರು ಯಾವುದೇ ಕೆಲಸ ಕಾರ್ಯಗಳಿಲ್ಲದೆ. ಹರಟೆ ಹೊಡೆಯುತ್ತ ಬರುವ ಹೆಣ್ಣುಮಕ್ಕಳನ್ನು ಚೇಡಿಸುತ್ತ ಕಾಲಹರಣ ಮಾಡುತ್ತಿರುತ್ತಾರೆ. ಅಂಥ ತುಂಟರ ಸಾಲಿನಲ್ಲಿ ರಾಮ ಎಂಬವನು ಇಲ್ಲಿ ಕಂಡುಬರುತ್ತಾನೆ. ಬಾವಿಯ ನೀರಿಗೆ ಬರುವ ಹೆಣ್ಣುಗಳನ್ನು ಮಾತನಾಡಿಸುತ್ತ ಕಾಲಹರಣ ಮಾಡುತ್ತಿದ್ದ ರಾಮನ ಕಣ್ಣಿಗೆ ಈ ಗರತಿ ಬೀಳುತ್ತಾಳೆ. ಇವಳ ಅಲಂಕಾರಕ್ಕೆ ಮಾರುಹೋದ ಆ ಗೆಣೆಯ ರಾಮ

ಹೆಣ್ಣೆ ಯಾವೊಳು ಹೆಣ್ಣೆ ನೀರಿಗೆ ಹೊಗುದು
ನಿಂತು ಮಾತಾಡೆ । ಹೆಣ್ಣೆ
ತಡೆದು ಮಾತಾಡೆ

ಎಂದು ಕೇಳಿಕೊಳ್ಳುತ್ತಾನೆ. ಆಗ ತಾನು ಸಮಸ್ಯೆಯಲ್ಲಿ ಸಿಕ್ಕಿಕೊಂಡ ಅನುಭವ ಇವಳಿಗಾಗುತ್ತದೆ. ಆದರೂ ಆತನಿಗೆ ತನ್ನ ಮನೆಗೆ ಬರುವಂತೆ ಅಹ್ವಾನ ನೀಡುತ್ತಾಳೆ. ಇದು ತಮಾಸೆಗೋ, ಅಥವಾ ಸಂಕಷ್ಟದಿಂದ ತಪ್ಪಿಸಿಕೊಳ್ಳಲು ಹೇಳಿದ ಮಾತಾಗಿರದೆ ಗಂಡ ಮನೆಯಲ್ಲಿ ಇಲ್ಲದ ಸಮಯದಲ್ಲಿ ಗೆಣೆಕಾರನೊಂದಿಗೆ ಕಾಲಕಳೆಯುವ ಉದ್ದೇಶವೆಂಬುದು ಮೇಲ್ನೋಟಕ್ಕೆ ಎದ್ದು ಕಾಣುತ್ತದೆ. ಆ ಗರತಿ ಹೇಳುವ ಮಾತನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಓಹೊ ಗಂಡನಾದರೆ ದಂಡಿಗೆ ಹೋದ
ಊರಿಗೆ ಬಾ ಗೆಣೆಯ। ನೀನು
ಚಂಜೆಗೆ ಬಾ ಗೆಣೆಯ

ಎನ್ನುವ ಮಾತುಗಳು ಮೇಲಿನ ಮಾತನ್ನು ಪುಷ್ಟೀಕರಿಸುತ್ತವೆ. ಗಂಡುಳ್ಳ ಹೆಣ್ಣು ಗುಟ್ಟಾಗಿ ಗೆಣೆಯನೊಂದಿಗೆ ಕಳೆಯುವ ಆಶಯವಿರುವುದು ಇಲ್ಲಿ ಎದ್ದು ತೋರುತ್ತದೆ. ಗಂಡನಿಗೂ ತಿಳಿಯದಂತೆ ಹೆಂಡತಿಯು ಗೆಣೆಕಾರನೊಂದಿಗೆ ಸಂಬಂಧವಿರಿಸಿಕೊಂಡ ಎಷ್ಟೋ ಘಟನೆಗಳು ದಿನಾಲು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿವೆ. ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿಯೂ ಕಂಡುಬರುತ್ತವೆ. ಪೋಷಾಕು ಹಾಕಿ ತಿರುಗವ ಗಂಡಸರು ಇಂಥ ಅವಕಾಶಕ್ಕಾಗಿಯೇ ಕಾಯುತ್ತಿರುವ ಚಿತ್ರಣವನ್ನು ಇದು ಕಣ್ಣಿಗೆ ಕಟ್ಟುವಂತೆ ತಿಳಿಸುತ್ತದೆ.

ಇಂಥ ಮನಸ್ಥಿತಿಯುಳ್ಳ ಹೆಣ್ಣು ಮಕ್ಕಳು ಗಂಡನಿಗಿಂತ ಗೆಣೆಯನಿಗೆ ಹೆಚ್ಚು ಆಧ್ಯತೆಯನ್ನು ನೀಡುತ್ತಾರೆ. ಬರುವ ಗೆಣೆಯನಿಗಾಗಿ ಮಾಡಿಕೊಳ್ಳುವ ಸಿದ್ಧತೆಗಳನ್ನು ನೋಡಿದರೆ ತಿಳಿಯುತ್ತದೆ. ಆತನನ್ನು ಸ್ವಾಗತಿಸುವುದಕ್ಕಾಗಿಯೇ ಹೋಳಿಗೆ, ಒಬ್ಬಿಟ್ಟು, ಕಜ್ಜಾಯ ಮಾಡುತ್ತಾಳೆ. ಅವನು ಬಂದಾಗ ಕಾಲಿಗೆ ನೀರು ಕೊಡುತ್ತಾಳೆ. ಹೀಗೆಯೇ ಗಂಡ ಮರಳಿ ಬರುವವರೆಗೂ ಗುಟ್ಟಾಗಿ ಇವರ ಕಾಮದಾಟ ನಡೆದೆ ಇರುತ್ತದೆ. ಇದು ಕಳ್ಳತನದಲ್ಲಿ ಕೂಡುವ ಇಂದಿನ ಗಂಡು ಹೆಣ್ಣುಗಳ ಸ್ಥಿತಿಯನ್ನು, ಗಂಡನಿದ್ದರೂ ತನಗೆ ಪ್ರಿಯವಾದವನೊಡನೆ ಸೇರಿ ತಾಳಿಕಟ್ಟಿದ ಗಂಡನಿಗೆ ಮೋಸ ಮಾಡುವ ಹೆಣ್ಣುಗಳ ಮನಸ್ಥಿಯನ್ನು ಈ ಗೀತೆ ಬಿಚ್ಚಿಡುತ್ತದೆ. ಇಂಥ ಎಷ್ಟೋ ಘಟನೆಗಳು ನಮ್ಮ ಸುತ್ತಮುತ್ತ ನಡೆಯುತ್ತಲೇ ಇರುತ್ತವೆ. ಆದರೆ ಅದು ಕೆಲವೊಮ್ಮೆ ಗೊತ್ತಾಗುವುದೇ ಇಲ್ಲ.

ಮಕ್ಕಳ ಮನೋಭಾವವೆಂದರೆ; ತಮ್ಮ ಮನೆಗೆ ಪರಿಚಿತರಲ್ಲದವರನ್ನು ಹೊರತುಪಡಿಸಿ ಅಪರಿಚಿತರು ಬಂದಾಗ ಅವರ್‍ಯಾರು ಎಂದು ಪ್ರಶ್ನೆ ಮಾಡುವುದು ಸಹಜ. ಹಾಗೆಯೆ ಇಲ್ಲಿಯೂ ಆಡಲು ಹೋದ ಮಕ್ಕಳು ಮರಳಿ ಮನೆಗೆ ಬಂದಾಗ ತನ್ನ ತಂದೆಯಲ್ಲದವನನ್ನು ತನ್ನ ತಾಯಿಯೊಡನೆ ಇರುವುದನ್ನು ಕಂಡು ಇವನಾರು? ಎಂದು ಕೇಳುತ್ತಾರೆ. ಇದು ತನ್ನ ಗಂಡನಿಗೆ ಗೊತ್ತಾಗುತ್ತದೆ ಎಂದು ತಾನು ಹೆತ್ತ ಮಕ್ಕಳನ್ನೆ ಕಟ್ಟಿಹಾಕಿ ಹಿಂಸೆಗೆ ಒಳಪಡಿಸಿ ಕೊಂದುಹಾಕುತ್ತಾಳೆ. ಇದೊಂದು ಹೃದಯ ವಿದ್ರಾವಕ ಸನ್ನೀವೇಶವನ್ನು ಜನಪದರು ಸೃಷ್ಟಿಸುತ್ತಾರೆ. ಇಲ್ಲಿ 'ಕೆಟ್ಟಮಕ್ಕಳಿರುತ್ತಾರೆ; ಆದರೆ ಕೆಟ್ಟ ತಾಯಿ ಇರುವುದಿಲ್ಲ' ಎಂಬ ಮಾತಿಗೆ ವಿರುದ್ಧವಾಗಿರುತ್ತದೆ. ಸಮಾಜದಲ್ಲಿ ಕೆಟ್ಟ ತಾಯಂದಿರು ಇರುತ್ತಾರೆ ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿ ನಿಲ್ಲುತ್ತದೆ. ಗರತಿಯರು ಎಂಬ ಸೋಗಿನಲ್ಲಿ ಕೆಲವರು ಕಾಮಪಿಪಾಸಿಗಳೂ ಆಗಿರುತ್ತಾರೆ ಎಂಬುದನ್ನು ಈ ಕಥನಗೀತೆಯ ಮೂಲಕ ತಿಳಿಸಲು ಯತ್ನಿಸಿದಂತಿದೆ. ಪ್ರಸ್ತುತ ದಿನಗಳಲ್ಲಿಯೂ ಇಂಥ ಘಟನೆಗಳುಳ್ಳ ಕಥಾನಕಗಳು ಸಹಜವಾಗಿಯೇ ಕಂಡುಬರುತ್ತವೆ.

ಹೊರಗೆ ದುಡಿಯಲು ಹೋಗುವ ಗಂಡುಗಳ ಸ್ಥಿತಿ ಈ ಗೀತೆ ಕಥಾನಾಯಕನದು. ಈತನು ತನ್ನ ಮಡದಿಯ ಮೇಲೆ ನಂಬಿಕೆಯಿಟ್ಟು ದಂಡಿಗೆ ಹೋದವನು ಮರಳಿ ಬಂದಾಗ ಆಕೆಯ ನಿಜ ಸ್ಥಿತಿ ತಿಳಿದು ನೊಂದುಕೊಳ್ಳುತ್ತಾನೆ. ತನ್ನ ಕಾಮದಾಸೆಗೆ ಮಕ್ಕಳನ್ನೆ ಕೊಂದಿರುವುದು ತಿಳಿದು ಮರುಗುತ್ತಾನೆ. ತಾನೂ ಕೂಡ ಕೊಲೆಯಾಗುತ್ತಾನೆ. ಇದು ಅಮಾಯಕ ಗಂಡುಗಳು ಸ್ಥಿತಿಯನ್ನು ನೆನಪಿಸುತ್ತದೆ. ಜನಪದರು ಇಂಥ ಸ್ಥಿತಿಯುಳ್ಳ ಗಂಡು-ಹೆಣ್ಣುಗಳ ಚಿತ್ರಣವನ್ನು ಮನಮುಟ್ಟುವಂತೆ ತಿಳಿಸುತ್ತಾರೆ. ಪ್ರಸ್ತುತ ದಿನಮಾನಗಳಲ್ಲಿ ಕಥಾನಾಯಕಿಯಂತಹ ಮನಸ್ಥಿತಿಯವರು ಕಾಣಬಹುದಾಗಿದೆ. ಎಷ್ಟೋ ಇಂದಿನ 'ಪೋಲಿಸ್ ವಾರೆಂಟೆ' ಎಂಬ ಹೆಸರಿನಲ್ಲಿ ಪ್ರಸಾರವಾಗುವ ಕಾರ್ಯಕ್ರಮದಲ್ಲಿ ಇಂಥಹ ಪ್ರಸಂಗಗಳಿರುವ ಕಥಾನಕಗಳು ಪ್ರಸಾರವಾಗುತ್ತಿರುವುದನ್ನು ನೋಡಿದಾಗ ಈ ಕಥನಗೀತೆ ಪ್ರಸ್ತುತ ಸಮಾಜಕ್ಕೆ ಹೆಚ್ಚು ಸೂಕ್ತವಾದುದು ಎನಿಸುತ್ತದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ; ಗ್ರಾಮೀಣ ಪ್ರದೇಶಗಳಲ್ಲಿ ಋಷಿಯ ಮೂಲ, ನೀರಿನ ಆಳ, ಹೆಣ್ಣಿನ ನೆಲೆ ಈ ಮೂರನ್ನು ಕಂಡು ಹಿಡುವುದು ಹೆಚ್ಚು ಪ್ರಯಾಸಕರವಾದ ಸಂಗತಿ ಎಂದು ರೂಢಿ ಮಾತಿನಲ್ಲಿ ಹೇಳುತ್ತಾರೆ. ಅದೇ ರೀತಿ ಈ ಕಥನಗೀತೆಯ ಕಥಾನಾಯಕಿ ಗಂಡನಿರುವಾಗ ಸೌಮ್ಯಸ್ವಭಾವದವಳಂತಿದ್ದು, ಗಂಡನಿಲ್ಲದ ಸಮಯದಲ್ಲಿ ಅನೈತಿಕ ಸಂಬಂಧವನ್ನು ಇರಿಸಿಕೊಳ್ಳುವುದನ್ನು ನೋಡಿದರೆ ಈ ಮಾತು ನಿಜವೆನಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ; ಜನಪದರು ತಾವು ಕಂಡ ಚಿತ್ರಣವನ್ನು ಗೀತೆಗಳ ಮೂಲಕ ಭಿತ್ತರಿಸುತ್ತ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಿದರು. ಆದರೆ ಈ ಜನಪದ ಕಥನಗೀತೆಯ ಒಂದು ದೊಡ್ಡ ದೋಷವೆಂದರೆ, ಕಥನಗೀತೆ ನಡೆದ ಸ್ಥಳವಾಗಲಿ, ಯಾರು ಬದುಕಿನಲ್ಲಿ ನಡೆಯಿತು ಎಂಬುದರ ಯಾವುದೇ ಸ್ಪಷ್ಟ ಮಾಹಿತಿಗಳು ಕಂಡಬರದಿರುವುದು. ಈ ಗೀತೆಯು ಜನಪದರ ಬದುಕಿನಲ್ಲಿಯ ದುರಂತದ ಜೀವನವನ್ನು ತಿಳಿಸುವುದಕ್ಕಾಗಿ ಹುಟ್ಟಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅದು ನಾಲಿಗೆಯಿಂದ ನಾಲಿಗೆ ಹರಿದು ಮುಂದೆ ಸಾಗಿದ್ದರ ಸಂಕೇತವನ್ನು ಇಲ್ಲಿ ಕಾಣಬಹುದು. ಇದು ಹೆಣ್ಣಿನ ದುರ್ನಡತೆಯಿಂದಾಗುವ ದುಷ್ಪರಿಣಾಮಗಳನ್ನು ತಿಳಿಸುವುದಕ್ಕಾಗಿ ಹುಟ್ಟಿಕೊಂಡಿರಬಹುದು ಎಂದು ಹೇಳಬಹುದು.